ಅಗ್ರಹಾರದಲ್ಲಿರುವ ಇನಾಂ ಜಮೀನಿನ ಪಿ.ಆರ್. ಸರ್ವೆ ಕೆಲಸ

(1985): ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೂಡಿಗೆರೆ ತಾಲ್ಲೂಕಿನ ಜೋಡಿ ಕನ್ನಾಪುರ ಮತ್ತು ಜಿ. ಅಗ್ರಹಾರದಲ್ಲಿ ಇನಾಮ್ ಜಮೀನಿ ಪಿ.ಆರ್. ಸರ್ವೆ ಕೆಲಸ ಯಾವಾಗ ಮಾಡಲಾಯಿತು;

ಆ. ಇನ್ನು ಪೂರ್ಣ (ಸರ್ವೆ ಕೆಲಸ) ಮಾಡದಿರಲು ಕಾರಣವೇನು; ಇದರಿಂದ ಜನರಿ ತೊಂದರೆಯಾಗುತ್ತಿರುವುದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ಜೋಡಿ ಕನ್ನಾಪುರ ಮತ್ತು ಜಿ. ಅಗ್ರಹಾರ ಗ್ರಾಮಗಳ ಹಿಸ್ಸಾ ಸರ್ವೆ (ಹಕ್ಕು ದಾಖಲೆಗಳನ ಜಾರಿಗೆ ಕೊಡುವುದು) ಕಾರ್ಯವನ್ನು ಕ್ರಮವಾಗಿ 1992 ಮತ್ತು 1991ರಲ್ಲಿ ಮಾಡಿದೆ.

ಆ. ಎರಡು ಗ್ರಾಮಗಳ ಹಿಸ್ಸಾ ಸರ್ವೆ ಕಾರ್ಯವನ್ನು ಪೂರೈಸಲಾಗಿದೆ. ಹಿಸ್ಸಾವಾರು ಕಂದಾಯ ನಿರ್ಣಯ ಕಾರ್ಯ ಹಾಗೂ ಆರ್.ಟಿ.ಸಿ. ಬರೆಯುವ ಕಾರ್ಯ ಬಾಕಿ ಇದೆ. ಅವಶ್ಯಕವಾಗಿ ಬೇಕಾಗು ಪಹಣಿ ಫಾರಂಗಳನ್ನು ಕಳುಹಿಸಿಕೊಡುವಂತೆ ಮೂಡಿಗೆರೆ ತಹಸೀಲ್ದಾರ್‌ರವರಿಗೆ ಈಗಾಗಲೆ ಸೂಚಿಸಲಾಗಿದೆ. ಬಾಕಿ ಇರುವ ಕಾರ್ಯವನ್ನು ಜಾಗ್ರತೆಯಾಗಿ ಮಾಡಲಾಗುವುದು. ತನ್ಮೂಲ ಹಿಡುವಳಿದಾರರಿಗೆ ಆಗುತ್ತಿರುವ ತೊಂದರೆಗಳು ನಿವಾರಣೆಯಾಗುತ್ತದೆ.

ಆರಾಧನಾ ಯೋಜನೆಯಡಿಯಲ್ಲಿ ದುರಸ್ತಿಪಡಿಸಲ್ಪಟ್ಟ ದೇವಸ್ಥಾನಗಳು

(1983): ಶ್ರೀಮತಿ ಮೋಟಮ್ಮ (ಮೂಡಿಗೆರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಆರಾಧನಾ ಯೋಜನೆಯಲ್ಲಿ ಎಷ್ಟು ದುರ್ಬಲ ವರ್ಗದವರ ಕೇರಿಗಳಲ್ಲಿ ದೇವಸ್ಥಾನಗಳ ದುರ ಅಥವಾ ಕಟ್ಟಿಸಲಾಗಿದೆ. (ಪಟ್ಟಿ ಕೊಡುವುದು);

ಆ. ಚಿಕ್ಕಮಗಳೂರು ಜಿಲ್ಲೆಗೆ ಈ ಯೋಜನೆಯಡಿಯಲ್ಲಿ ಬಂದ ಹಣವೆಷ್ಟು ? ಯಾವ ಯಾ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ದೇವಸ್ಥಾನಗಳನ್ನು ಕಟ್ಟಿಸಲಾಗಿದೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಅ. ರಾಜ್ಯದಲ್ಲಿ ಆರಾಧನಾ ಯೋಜನೆಯಡಿಯಲ್ಲಿ ದೇವಸ್ಥಾನಗಳ ದುರಸ್ತಿ ಮತ್ತು ಕಟ್ಟಿಸಿರು ವಿವರ ಈ ಕೆಳಕಂಡಂತೆ ಇದೆ.

ದುರಸ್ತಿಪಡಿಸಿರುವುದು	372
ಕಟ್ಟಿಸಿರುವುದು	66

ಆ. ಚಿಕ್ಕಮಗಳೂರು ಜಿಲ್ಲೆಗೆ ರೂ. 19,64,710-00 ಗಳನ್ನು ಬಿಡುಗಡೆ ಮಾಡಿದೆ.

ದೇವಾಲಯಗಳನ್ನು ಕಟ್ಟಿಸಿರುವ ವಿವರ ಕೆಳಕಂಡಂತೆ ಇದೆ.

ಪೂರ್ಣಗೊಂಡಿರುವುದು	ಪ್ರಗತಿ